ಅದನ್ನು ಉಳಿಸಿಕೊಳ್ಳಬೇಕು. ಅದು ನಿನ್ನ ಕೈಲಿದೆ. ನಿನ್ನ ಈ ಮಕ್ಕಳು ಆ ಮನೆಗೆ ಸೇರಿದ ಮಕ್ಕಳು. ಅವನ್ನು ನಾನು ಹೇಗೆ ಸಾಕಲಿ? ಗಂಡಸು ನಿನ್ನ ಗಂಡ ನಾಲ್ಕು ಕಡೆ ಹೋಗ್ತಾನೆ. ಆದರೆ ಮನೆಗೇ ಬರ್ತಾನಲ್ಲ! ಇನ್ನೊಂದು ಮದುವೆ ಏನು ಆಗಿಲ್ಲವಲ್ಲ! ಆಗಲೂ ಸಾಧ್ಯವಿಲ್ಲ.. ನೀನು ಹೀಗೆ ನಮ್ಮ ಮನೆಗೆ ಬಂದು ಕೂತರೆ ಆಗಿಬಿಡ್ತನಷ್ಟೇ..! ಈ ಮನೆಯಲ್ಲೇ ಇದ್ದು ನಿನ್ನ ಸ್ಥಾನ ಗಟ್ಟಿ ಮಾಡಿಕೊಳ್ಳಬೇಕು... ಆದಷ್ಟು ದುಡ್ಡು ಪೋಲಾಗದ ಹಾಗೆ ನೋಡಿಕೊಳ್ಳಬೇಕು.. ನಿಮ್ಮ ಮಾವನ ಬಳಿ ಹೇಳ್ತೀನಿ.. ನಾಲ್ಕು ಜನನ್ನ ಕಳಿಸಿ ಆ ಹೆಂಗಸಿಗೆ ಹೆದರಿಸಿ ಬರಲು ಹೇಳ್ತೀನಿ.. ನೀನು ಒಳ್ಳೆ ಮಾತಿಂದ ನಿನ್ನ ಗಂಡನ ಒಲಿಸ್ಕೊ... ಅವನಿಗೆ ಹೇಗೆ ಬೇಕೋ ಹಾಗೆ ಇರೋದು ಕಲಿತ್ಕೊ...' ಅಪ್ಪ ಉದ್ದಕ್ಕೆ ಉಪದೇಶ ಮಾಡಿದರು.

ಇದು ಮೊದಲನೆಯ ಬಾರಿಯಲ್ಲ ಅಪ್ಪ! ಒಂದೊಂದು ಬಾರಿ ಒಂದೊಂದು ಬಗೆಯ ಹೆಂಗಸರನ್ನು ಇಷ್ಟಪಡ್ತಾರೆ... ಈಗ..

ಈ ಬಗೆಯ ವಿಚಾರವೆಲ್ಲಾ ಹೀಗೆ ದನಿ ಎತ್ತಿ ಮಾತಾಡಬಾರದು.. ಗಂಡ ಹೆಂಡತಿ ಕೋಣೆಯಲ್ಲಿ ಗೌಪ್ಯದಲ್ಲಿ ಆಡಬೇಕಾದ ಮಾತುಗಳು.. ಇವು.. ಮಕ್ಕಳು ಓಡಾಡುತ್ತಾ ಇವೆ.. ವಯಸ್ಸಾದ ಅಜ್ಜಿ ಇದ್ದಾರೆ, ದೊಡ್ಡವರಾದ ಅತ್ತೆ.. ಮಾವ.. ಎಲ್ಲರೆದುರು ಆಡುವ ಮಾತುಗಳೇ? ನೀನೇ ಯೋಚನೆ ಮಾಡು..

ಹೂಂ ಹೇಳಿ ನಿಮ್ಮ ಮಗಳಿಗೆ! ದಿನಾ ಇದೇ ರಂಪ ರಾಮಾಯಣ... ಹೊರಗೆ ಸುತ್ತುವ ಗಂಡಸು.. ನೂರೆಂಟು ತೆವಲು ಇರುತ್ತೆ... ಅಷ್ಟಕ್ಕೂ ಇವಳಿಗೇನು ಕಮ್ಮಿ ಮಾಡಿಲ್ಲವಲ್ಲ ಅವನು...

ಅಪ್ಪನ ಮಾತು. ಬುದ್ಧಿವಾದ, ಅದಕ್ಕೆ ಅತ್ತೆಯ ಉತ್ತರ... ಮಾವನ ಸಹಮತ, ಅಮ್ಮನ ಮೌನ, ಅಜ್ಜಿಯ ಸಿಡುಕು ಮುಖ... ನನ್ನನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿತು.

'ಮೊನ್ನೆ ನಿನ್ನ ಹುಟ್ಟಿದ ಹಬ್ಬ ಅಂತ ಹೊಸ ಮಾದರಿಯ ನವರತ್ನದ ಸೆಟ್ ತರಲಿಲ್ಲವೇ ವಿಕ್ರಮ... ಇನ್ನೇನು ಗುನುಗು?..ಅತೀ ಆಯ್ತು... ಹೀಗೆ ಕೋಪಿಸಿಕೊಂಡು ಅಮ್ಮನ ಮನೆ ಅಂತ ಮತ್ತೊಮ್ಮೆ ಹೋದರೆ ಈ ಮನೆಗೆ ಸೇರಿಸೋದಿಲ್ಲ ನಾನು. ನಮ್ಮ ಮನೆತನದ ಗೌರವಕ್ಕೆ ಧಕ್ಕೆ ತರುವಂಥ ಹೆಣ್ಣು ನಮಗೆ ಬೇಡ...' ಗಂಟೆ ಹೊಡೆದಂತೆ ಅಜ್ಜಿಯ ಮಾತು.

'ಕೇಳಿಸ್ತಾ ಅಮ್ಮ ಹೇಳಿದ್ದು?.. ಒಪ್ಪಿಗೆ ಇಲ್ಲದೆ ಇದ್ದರೆ ಈಗಲೇ ನಿಮ್ಮಪ್ಪನ ಜೊತೆ..' ಮಾವನವರ ಮಾತನ್ನು ಅಪ್ಪ ಅರ್ಧಕ್ಕೆ ತಡೆದರು.

'ಇಲ್ಲ ಇಲ್ಲ ಅವಳಿಗೆ ಸರಿಯಾಗಿ ಬುದ್ಧಿ ಹೇಳಿದ್ದೇನೆ. ಇನ್ನೆಂದೂ ಹೀಗೆ ಮಾಡುವುದಿಲ್ಲ ಅವಳು.. ಹಿರಿಯರು ನೀವಿದ್ದೀರಿ ಬುದ್ಧಿ ಹೇಳಿ ಮಕ್ಕಳ ತಾಯಿ.. ಅವಳು.. ಏನೋ ಕೋಪದ ಭರದಲ್ಲಿ ಬಂದ್ಲು.. ಇನ್ನೆಂದೂ ಬರಲ್ಲ.. ನೀವು ಕಳಿಸಿದಾಗ ಎರಡು ದಿನ ಹಬ್ಬ ಹುಣ್ಣಿಮೆಗೆ ಬರ್ತಾಳಷ್ಟೇ... ಅಪ್ಪನ ದೈನ್ಯತೆ ನನ್ನಲ್ಲಿ ಅಸಹ್ಯ ಹುಟ್ಟಿಸಿತು. ಬದುಕು ಸಾಕೆನ್ನಿಸಿದರೆ ನೇಣು ಹಾಕಿಕೊಂಡು ಸಾಯುತ್ತೇನಾಗಲಿ.. ತೌರು ಮನೆ, ಅಪ್ಪ, ಅಮ್ಮ ಎಂದು ಖಂಡಿತಾ ಹೋಗುವುದಿಲ್ಲ...' ನಿರ್ಧಾರ ಮೂಡಿತು.

'ಒಳಗೆ ಹೋಗು.. ಕೈಕಾಲು ತೊಳೆದುಕೊಂಡು ದೇವರಿಗೆ ದೀಪ ಹಚ್ಚು ಹೋಗು..' ಅತ್ತೆ ಹೇಳಿದಾಗ ಮೆಲ್ಲನೆ ಒಳ ನಡೆದೆ ಎದೆ ಭಾರವಾಗಿದ್ದರೂ, ಕಣ್ಣು ಉರಿಯುತ್ತಿದ್ದರೂ ಕಂಬನಿ ಬರಲಿಲ್ಲ ಕೆನ್ನೆಯನ್ನು ತೇವಗೊಳಿಸಲಿಲ್ಲ..

'ತಾತ.. ಈ ಮನೆನೇ ತುಂಬಾ ಚೆನ್ನಾಗಿದೆ. ಕಾರಂತ ತಾತನ ಮನೆ ತುಂಬಾ ಚಿಕ್ಕದು'– ರಾಹುಲ್ ತನ್ನ ತಾತನ ಕಾಲು ಕಟ್ಟಿಕೊಂಡು ಹೇಳಿದಾಗ ಅಲ್ಲಿದ್ದವರೆಲ್ಲಾ ನಕ್ಕರು..

'ಇದು ನಿನ್ನ ಮನೆ ಕಣೋ! ನಾಳೆ ಈ ಮನೆಗೆ ಯಜಮಾನ ಆಗೋನು ನೀನು..' ಮಾವ ಜೋರು ದನಿಯಲ್ಲಿ ಹೇಳಿದಾಗ ಅಲ್ಲಿ ಮತ್ತೊಮ್ಮೆ ನಗು..

'ಬಾರೆ ಇಲ್ಲಿ ರಾಜಕುಮಾರಿ..' ಅಜ್ಜಿ ಮರಿಮೊಮ್ಮಗಳನ್ನು ಕರೆಯುತ್ತಿದ್ದರು.

'ಮುತ್ತಜ್ಜಿ ಅಂತ ನಿಮ್ಮನ್ನು ತುಂಬಾ ನೆನಸಿಕೊಳ್ತಾ ಇದ್ಲು..' ದೇಶಾವರಿ ನಗೆಯೊಂದಿಗೆ ಅಮ್ಮನ ಮಾತು..

ಕಿವಿ ಕೆಂಪೇರಿತು.. ಅಜ್ಜಿಗೆ ಖುಷಿಯಾಗಲಿ ಎಂದು ಇಂಥಾ ಹಸಿ ಹಸಿ ಸುಳ್ಳು ಹೇಳುವ ಅವಶ್ಯಕತೆಯಿದೆಯೇ..

ತಪ್ಪು ಮಾಡಿದವರು ಯಾರು?.. ಶಿಕ್ಷೆಯಾಗುತ್ತಿರುವುದು ಯಾರಿಗೆ?... ಮಗಳಿಗೆ ಅನ್ಯಾಯವಾಗುತ್ತಿರುವುದು ಅಪ್ಪ ಅಮ್ಮ ಗೊತ್ತಾಗುತ್ತಿಲ್ಲವೇ?.. ಮಗ ಆ ಸಿನಿಮಾ ನಟಿಯ ಹಿಂದೆ ಹೋಗುತ್ತಿರುವುದು.. ಬೆಂಗಳೂರಿನಲ್ಲಿ



## ಇಲ್ಲಿಯವರೆಗೆ

ಶ್ರೀಮಂತ ಮನೆತನದ ವಿಕ್ರಮನ ಮನೆಯವರು 'ಅವಳನ್ನು' ನೋಡಲು ಬರುತ್ತಾರೆ. ಆಕೆಯನ್ನು ನೋಡಿದ ವಿಕ್ರಮ ತಕ್ಷಣ ಮದುವೆಗೆ ಒಪ್ಪಿಕೊಳ್ಳುತ್ತಾನೆ. ಮದುವೆಯ ಖರ್ಚು ಸಮೇತ ತಾವೇ ಮಾಡುವುದಾಗಿ ಹೇಳುತ್ತಾರೆ. ಹುಡುಗಿ ಮನೆಯವರು ಸಂಭ್ರಮದಿಂದ ಓಡಾಡಿ ಅದ್ದೂರಿ ಮದುವೆ ನಡೆಯುತ್ತದೆ. ವಿಕ್ರಮನ ಮಡದಿಯಾಗಿ ಬಂಗಲೆ ಪ್ರವೇಶಿಸಿದ ಅವಳು ಬಸುರಿಯಾಗುತ್ತಾಳೆ. ಸೀಮಂತ ಶಾಸ್ತ್ರವನ್ನೂ ಭರ್ಜರಿಯಾಗೇ ಮಾಡುತ್ತಾರೆ. ಗಂಡು ಮಗು ಹುಟ್ಟಿದಾಗ ವಿಕ್ರಮ ಮನೆಯಲ್ಲಿ ಎಲ್ಲರಿಗೂ ಖುಷಿಯಾಗುತ್ತದೆ. ಅಜ್ಜ–ಅಜ್ಜಿ ಕನಕಾಭಿಷೇಕ ಮಾಡಿಸಿಕೊಳ್ಳುತ್ತಾರೆ.

ಅವಳಿಗೋಸ್ಕರ ಮನೆ ಖರೀದಿ ಕೊಟ್ಟಿರುವುದು ಗೊತ್ತಿಲ್ಲವೇ ಅತ್ತೆ ಮಾವನಿಗೆ?

ರಾತ್ರಿ ಹನ್ನೆರಡು ಗಂಟೆಗೆ ಮನೆಗೆ ಬರುವ ಮೊಮ್ಮಗನ ಬಾಯಿಂದ ವಾಸನೆ, ಸಂಸ್ಕೃತ ಬೈಗುಳು ಗೊತ್ತಿಲ್ಲವೇ ಅಜ್ಜಿಗೆ?

ಮನೆಯ ಮಗ, ಗಂಡಸು ಹಾದಿ ತಪ್ಪಿದ್ದರಿಂದ ಹೋಗದ ಮಾನ ಅದನ್ನು ಎತ್ತಿ ಆಡುವ ನನ್ನಿಂದ ಹೋಗುತ್ತದೆಯೇ ಎಲ್ಲರೂ ಸೇರಿ ಬುದ್ಧಿ ಹೇಳಬೇಕಾದ್ದು ಅವರಿಗಲ್ಲವೇ? ಆದರೆ ಎಲ್ಲರೂ ನನ್ನ ಮೇಲೆ ಏಕೆ ಮುಗಿ ಬೀಳ್ತಿದ್ದಾರೆ..?

ತುಪ್ಪದ ದೀಪದ ಬೆಳಕಿನಲ್ಲಿ ಪ್ರಶಾಂತವಾಗಿ ಕಂಗೊಳಿಸುತ್ತಿದ್ದ ಗೌರಿಯ ವಿಗ್ರಹವನ್ನೇ ನೋಟ್ಟಿಸಿದೆ. ನನ್ನದೇನು ತಪ್ಪು? ಎಂದೋ ಓದಿದ ಕವನವೊಂದು ನೆನಪಿಗೆ ಬಂತು. ಅರ್ಥ ಚೆನ್ನಾಗಿ ನೆನಪಿದೆ. ಆದರೆ ಪದಗಳು ಇಲ್ಲ..

ಗಂಡ ಪರಸ್ತ್ರೀ ಹಿಂದೆ ಹೋದ.. ಕಾಪಾಡೋ ತಂದೆ ಎಂದು ಶಿವನಿಗೆ ಮೊರೆ ಹೋದರೆ.. ಅವನೇ ತಲೆಯ ಮೇಲೆ ಗಂಗೆಯನ್ನು ಕೂರಿಸಿ ಕೊಂಡಿದ್ದಾನೆ. ತಿರುಪತಿ ತಿಮ್ಮಪ್ಪ.. ನೀನೇ ಗತಿಯಪ್ಪಾ ಎಂದು ಹೋದರೆ ಶ್ರೀದೇವಿ, ಭೂದೇವಿಯರ ಮಧ್ಯೆ ಕಂಗೊಳಿಸುತ್ತಿದ್ದಾನೆ... ಕೃಷ್ಣಾ ಎಂದರೆ, ಪರಿಹಾರ ನೀಡಪ್ಪ ಎಂದತ್ತ ತಿರುಗಿದರೆ ಹದಿನಾರು ಸಾವಿರ ನಾರಿಯರ ಪ್ರಾಣಪ್ರಿಯನಾತ, ಏಕಪತ್ನೀವ್ರತಸ್ಥ ನೀನೇ ಸರಿ ಎಂದು ಶ್ರೀರಾಮನತ್ತ ಬಾಗಿದರೆ.. ಬಸುರಿ ಹೆಂಡತಿಯನ್ನು ಕಾಡಿಗಟ್ಟಿದ ಭೂಪ ಆತ... ಅಯ್ಯೋ ಯಾರನ್ನು ಮೊರೆ ಹೋಗಲಿ?..

ಎಂಬರ್ಥದ ಕವನ. ತಲೆ ಕೊಡವಿ, ವಿಷಾದದ ನಗೆ ನಕ್ಕು ನೆಲಕ್ಕೆ ಹಣೆ ಮುಟ್ಟಿಸಿ ನಮಸ್ಕರಿಸಿದೆ.

ಸುಖವಿಲ್ಲ, ಸಂತಸವಿಲ್ಲ, ತೃಪ್ತಿಯಿಲ್ಲ ನೆಮ್ಮದಿಯಿಲ್ಲ ನಿಜ, ಆದರೆ ಎಲ್ಲವನ್ನೂ ನಿರ್ವಿಕಾರವಾಗಿ ಒಪ್ಪಿಕೊಳ್ಳುವ ಶಕ್ತಿಕೊಡು ತಾಯಿ. ಶಕ್ತಿ ಕೊಡು.

ಸಿನಿಮಾ ನಟಿಯೊಬ್ಬಳ ಹಿಂದೆ ಹೋದ ನನ್ನ ಗಂಡ ಅಂದರೆ ಅವಳು ಚೆಂದವಿದ್ದಾಳೆ, ಅಂದವಿದ್ದಾಳೆ, ಸಣ್ಣಗಿದ್ದಾಳೆ.. ಅದಕ್ಕೆ ಹೋಗ್ತಾನೆ ನೀನು ಸಣ್ಣಗಾಗು... ಅವನಿಗೆ ಚೆಂದಾವಾಗಿ ಕಾಣು ಅಂತರಲ್ಲ ಈ ಅಮ್ಮ, ಅತ್ತೆ ಅಜ್ಜಿ ಎಲ್ಲಾ... ಅದರ ಬದಲು ಇವರನ್ನು ಪ್ರಶ್ನಿಸುವುದಿಲ್ಲ ಏಕೆ?

ಸರಿ.... ಇವರು ಹೇಳುವುದನ್ನೂ ಮಾಡಿ ನೋಡಿಬಿಡಬೇಕು.. ಒಪ್ಪಿಕೊಳ್ಳುವುದು ಅನಿವಾರ್ಯ... ಆದರೆ ನೋಡಿದವರು, ಇಂಥ ಚೆಲುವೆ ಹೆಂಡತಿಯಿದ್ದರೂ  ಯಾರು ಯಾರೋ ಮೂರು ಕಾಸಿನ ಸೂಳೆಯರ ಹಿಂದೆ ಈ ವಿಕ್ರಮ ಯಾಕೆ ಹೋಗ್ತಾನೆ ಎಂದು ಎಲ್ಲರೂ ಪ್ರಶ್ನಿಸಬೇಕು.... ನಿರ್ಧಾರ ಮಾಡುತ್ತಿದ್ದ ಹಾಗೆ ನೆಮ್ಮ ನೆಮ್ಮದಿ ಮೂಡಿತು. ಮಾನಸಿಕವಾಗಿ ಎಂದೂ